**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ನ್ಯಾಧಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 210 / 2021**

| | | |
|---|---|---|
| ಸಾಕ್ಷಿಯ ಹೆಸರು | : ರಾಘವೇಂದ್ರ | |
| ತಂದೆಯ ಹೆಸರು | : ಪುಟ್ಟಾಚಾರ್ | |
| ವಯಸ್ಸು | : 36 ವರ್ಷ | |
| ಉದ್ಯೋಗ | : ಅಕ್ಕಸಾಲಿಗರು | ಚಾಸಾ –7 |
| ವಾಸ ಸ್ಥಳ | : ಕೊಳ್ಳೇಗಾಲ | ಪ್ರಾಸಾ –4 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ** 21.02.2026

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನಾನು ಕೊಳ್ಳೇಗಾಲದಲ್ಲಿ ಚಿನ್ನದ ಕೆಲಸವನ್ನು 20 ವರ್ಷಗಳಿಂದ ಮಾಡುತ್ತಿದ್ದೇನೆ. 3ನೇ ಆರೋಪಿ ಗೊತ್ತು ಆತ ನನ್ನ ಸ್ನೇಹಿತ. ಆತ ಚಿಲ್ಲರೆ ಅಂಗಡಿಯಲ್ಲಿ ಕೆಲಸ ಮಾಡುತ್ತಾನೆ. ಆರೋಪಿ ನನ್ನ ಜೊತೆ ಹಣಕಾಸಿನ ವ್ಯವಹಾರ ಮಾಡುತ್ತಾನೆ ಎಂದರೆ ಸರಿಯಲ್ಲ. ಪೋಲಿಸರು ನನ್ನನ್ನು ಚಿನ್ನದ ತೂಕ ಮಾಡಲು ಕರೆಸಿರುತ್ತಾರೆ. ಚಿನ್ನದ ತೂಕ ಮತ್ತು ಮೌಲ್ಯವನ್ನು ನಾನು ತಿಳಿಸಿರುತ್ತೇನೆ. ಒಟ್ಟು ಎಷ್ಟು ಚಿನ್ನಾಭರಣಗಳನ್ನು ತೂಕ ಮಾಡಿದ್ದೇನೆಂದು ನೆನಪಿಲ್ಲ. ಅಂದಾಜು ಸುಮಾರು ಆರೇಳು ವರ್ಷಗಳ ಹಿಂದೆ ಪೋಲಿಸ್ ಠಾಣೆಯಲ್ಲಿ ಚಿನ್ನದ ತೂಕ ಮತ್ತು ಮೌಲ್ಯವನ್ನು ಮಾಡುವ ಬಗ್ಗೆ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಅಮಾನತ್ತು ಮಹಜರನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–4 ಎಂದು ಸಾಕ್ಷಿ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು. ಆ ಮಹಜರಿಗೆ ಬೇರೆ ಯಾರು ಸಹಿ ಮಾಡಿರುತ್ತಾರೆಂದು ಮತ್ತು ಆಗ ಸಮಯ ಎಷ್ಟಾಗಿತ್ತೆಂದು ನನಗೆ ಗೊತ್ತಿಲ್ಲ. ಸುಮಾರು ಪ್ರಕರಣಗಳಿಗೆ ಸಂಬಂಧಪಟ್ಟಂತೆ ಚಿನ್ನಗಳನ್ನು ತೂಕ ಮಾಡಿ ಮತ್ತು ಮೌಲ್ಯವನ್ನು ಹೇಳಿರುತ್ತೇನೆಂದು ನನಗೆ ಗೊತ್ತಿಲ್ಲ. ನಾನು ಸುಮಾರು 3 ರಿಂದ 4 ಗಂಟೆಗಳ ಕಾಲ ತೂಕ ಮತ್ತು ಮೌಲ್ಯಗಳ ಬಗ್ಗೆ ನೋಡಿ ನಿರ್ಧರಿಸಿರುತ್ತೇನೆ. ಆ ದಿನ ನಾನು ತೂಕ ಮಾಡಿದ ಒಡವೆಗಳು ಯಾರಿಗೆ ಸೇರಿತ್ತು ಮತ್ತು ಯಾರಿಂದ ವಶಪಡಿಸಿಕೊಳ್ಳಲಾಯಿತೆಂದು ನನಗೆ ಗೊತ್ತಿಲ್ಲ. ಆ ದಿನ ಠಾಣೆಯಲ್ಲಿ ನನ್ನನ್ನು ಹೊರತು ಪಡಿಸಿ ಬೇರೆ ಯಾರಿದ್ದರು ಎಂದು ನನಗೆ ನೆನಪಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಮಾನ್ಯ ಸ.ಸ.ಅ.ರವರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಅನುಮತಿಸಲಾಯಿತು.)

**ಪಾಟೀ ಸವಾಲು – ಮಾನ್ಯ ಸ.ಸ.ಅ. ರವರಿಂದ**

ದಿನಾಂಕಃ 17.11.2017 ರಂದು ಪೋಲಿಸರು ಒಬ್ಬ ಆಸಾಮಿಯನ್ನು ತೋರಿಸಿದ್ದು ಅವನ ಹೆಸರು ಮಹಮದ್ ಫೈರೋಜ್ ಖಾನ್ ಎಂದು ತಿಳಿಸಿ ಆತನು ದರೋಡೆ ಮಾಡಿರುವ ಚಿನ್ನಗಳನ್ನು ತೂಕ ಮಾಡುವ ಸಲುವಾಗಿ ನನ್ನನ್ನು ಕರೆದಿರುತ್ತಾರೆ ಎಂದರೆ ಸರಿ. ಒಟ್ಟು 5 ಚಿನ್ನದ ಆಭರಣಗಳನ್ನು ಒಂದು 30 ಗ್ರಾಂ, 96 ಗ್ರಾಂ,

20 ಗ್ರಾಂ, 20.1 ಗ್ರಾಂ, 30.5 ಗ್ರಾಂ ತೂಕ ಮಾಡಿ ಕೊಟ್ಟಿರುತ್ತೇನೆ ಎಂದರೆ ಸರಿ. ಆ ವಿಷಯಕ್ಕೆ ಸಂಬಂಧಪಟ್ಟಂತೆ ನಿಪಿ-4 ಮಹಜರನ್ನು ಬೆಳಿಗ್ಗೆ 11.00 ರಿಂದ 12.30 ರ ಸಮಯದಲ್ಲಿ ಮಾಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಚಾಸಾ 13 ಮತ್ತು ಚಾಸಾ 14 ರವರು ಹಾಜರಿದ್ದು ಅವರುಗಳು ಮತ್ತು ಪೋಲಿಸರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 3ನೇ ಆರೋಪಿಯು ನನ್ನ ಬಳಿ ಹಣಕಾಸಿನ ವ್ಯವಹಾರ ಮತ್ತು ಚಿನ್ನಾಭರಣಗಳನ್ನು ಅಡ ಮತ್ತು ಮಾರಾಟ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು 3ನೇ ಆರೋಪಿಯಿಂದ ಪಡೆದ ಆಭರಣ ದರೋಡೆ ಮಾಡಿದ ಆಭರಣಗಳು ಎಂದು ತಿಳಿದಿದ್ದರೂ ಅದನ್ನು ನಾನು ಒಪ್ಪಿಕೊಂಡಲ್ಲಿ ನನಗೆ ತೊಂದರೆಯಾಗುತ್ತದೆ ಎಂಬ ಉದ್ದೇಶದಿಂದ ಪೋಲಿಸರು ಸದರಿ ಆಭರಣಗಳನ್ನು ಪೋಲಿಸರು ನನ್ನಿಂದ ಅಮಾನತ್ತು ಪಡಿಸಿಕೊಂಡಿದ್ದರೂ ಸಹ ನನ್ನಿಂದ ಅಮಾನತ್ತು ಪಡಿಸಿಕೊಂಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 210 / 2021**

| | | |
|---|---|---|
| ಸಾಕ್ಷಿಯ ಹೆಸರು | : ಎಲ್. ನಾಗೇಂದ್ರ | |
| ತಂದೆಯ ಹೆಸರು | : ಲೇಟ್ ಲಿಂಗಯ್ಯ | |
| ವಯಸ್ಸು | : 45 ವರ್ಷ | |
| ಉದ್ಯೋಗ | : ವ್ಯಾಪಾರ | ಚಾಸಾ –5 |
| ವಾಸ ಸ್ಥಳ | : ಕೊಳ್ಳೇಗಾಲ | ಫ್ರಾಸಾ –3 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 21.02.2026**

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನನಗೆ ಚಾಸಾ 6 ರವರು ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿರುತ್ತೇನೆ. ನಿಪಿ–2 ರಲ್ಲಿರುವ ಸಹಿ ನನ್ನದೆ ಅದನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ದಿನಾಂಕಃ 25.05.2018 ರಂದು ಬೆಳಿಗ್ಗೆ 8.00 – 8.45 ಸಮಯದಲ್ಲಿ ಪಟ್ಟಣ ಪೋಲಿಸರು ಕಾಶಿ ವಿಶ್ವನಾಥ ದೇವಸ್ಥಾನದ ಚಾಸಾ 1 ರವರ ಮನೆಯ ಬಳಿ ಮಹಜರು ಮಾಡಲು ಕರೆದುಕೊಂಡು ಹೋಗಿ ಚಿನ್ನ ಕಳುವಾದ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ಮಹಜರು ಮಾಡಿರುತ್ತಾರೆ ಆ ಸಮಯದಲ್ಲಿ ನಾನು ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ಚಾಸಾ 6, ಚಾಸಾ 1 ಮತ್ತು ಪೋಲಿಸರು ಮತ್ತು ಆರೋಪಿಗಳು ಇದ್ದರು. ನಿಪಿ–3 ರಲ್ಲಿರುವ ಸಹಿ ನನ್ನದೆ ಅದನ್ನು ನಿಪಿ–3(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಬೆಳಿಗ್ಗೆ 10.00 – 10.30 ರ ಸಮಯದಲ್ಲಿ ಪೋಲಿಸ್ ಠಾಣೆಯಲ್ಲಿ ನನಗೆ ಚಿನ್ನವನ್ನು ತೋರಿಸಿ ಮಹಜರು ಮಾಡಿರುತ್ತಾರೆ. ಸಾಕ್ಷಿಗೆ ಅಮಾನತ್ತು ಮಹಜರು ಕಾಲದಲ್ಲಿ ತೆಗೆದ 8 ಪೋಟೋಗಳನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲು – ಆರೋಪಿಗಳ ಪರ ವಕೀಲರಿಂದ**

ನಾನು ನಗರಸಭಾ ಕೌನ್ಸಿಲರ್ ಆಗಿದ್ದೆ ಎಂದರೆ ಸರಿ. ನನಗೆ ಪಟ್ಟಣ ಪೋಲಿಸ್ ಠಾಣೆಯ ಸಿಬ್ಬಂದಿಗಳು ಪರಿಚಯವಿರುತ್ತಾರೆ ಎಂದರೆ ಸರಿ. ಠಾಣೆಯಲ್ಲಿ ಬೇರೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಹಜರಿಗೆ ನನ್ನನ್ನು ಕರೆದಾಗ ನಾನು ಹೋಗುತ್ತೇನೆ ಎಂದರೆ ಸರಿ. ನಾನು ಹಲವಾರು ಮಹಜರುಗಳಿಗೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಪೋಲಿಸರು ನೋಟಿಸ್ ಕೊಟ್ಟು ಮಹಜರಿಗೆ ಕರೆದಿರುವುದಿಲ್ಲ. ಮಹಜರಿಗೆ ಬರಲು ಪೋನ್ ಮುಖಾಂತರ ಕರೆದ ಕಾರಣ ಹೋಗಿರುತ್ತೇನೆ ಎಂದರೆ ಸರಿ. ಪೋಲಿಸರಿಗೆ ಸಹಾಯ ಮಾಡಲು ಪೋಲಿಸರು ಸೃಷ್ಟಿ ಮಾಡಿದ ಎರಡು ಮಹಜರುಗಳಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮಾಂಗಲ್ಯ ಚೈನನ್ನು ಈ ಕೇಸಿಗೆ ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ–2 ಕ್ಕೆ ನಾನು ಕಾಶಿ ವಿಶ್ವನಾಥ ದೇವಸ್ಥಾನದ ಚಾಸಾ 1 ರವರ ಮನೆಯ ಬಳಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 1583 / 2021**

| | | |
|---|---|---|
| ಸಾಕ್ಷಿಯ ಹೆಸರು | : ಮಲ್ಲಿಕಾರ್ಜುನ್ | |
| ತಂದೆಯ ಹೆಸರು | : ಚೆನ್ನಮಲ್ಲ | |
| ವಯಸ್ಸು | : 55 ವರ್ಷ | |
| ಉದ್ಯೋಗ | : ವ್ಯವಸಾಯ | ಚಾಸಾ –1 |
| ವಾಸ ಸ್ಥಳ | : ಬಸ್ತೀಪುರ | ಪ್ರಾಸಾ –1 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ** 21.02.2026

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನನಗೆ ಚಾಸಾ 1 ಮತ್ತು 3 ರವರು ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿಗಳ ಗೊತ್ತು. ಆರೋಪಿಗಳಿಗೂ ನನಗೂ ಯಾವುದೇ ಗಲಾಟೆಯಾಗಿರುವುದಿಲ್ಲ. ಆರೋಪಿಗಳು ನನ್ನನ್ನು ಹಿಡಿದು ತಡೆದು ಅವಾಚ್ಯ ಶಬ್ಧಗಳಿಂದ ಬೈದು ಯಾವುದೇ ವಸ್ತುವಿನಿಂದ ಹೊಡೆದಿರುವುದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿರುವುದಿಲ್ಲ. ನಾನು ಆರೋಪಿಗಳ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ ಮತ್ತು ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ನಾನು ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿದ್ದು ಅದನ್ನು ಏತಕ್ಕೆ ಮಾಡಿರುತ್ತೇನೆಂದು ಗೊತ್ತಿರುವುದಿಲ್ಲ. ಪೋಲಿಸರು ಅದನ್ನು ಓದಿ ನನಗೆ ಹೇಳಿರುವುದಿಲ್ಲ. ಪೋಲಿಸರು ನನ್ನ ಸಮಕ್ಷಮದಲ್ಲಿ ಮಹಜರು ಮಾಡಿ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಹೇಳಿಕೆ/ದೂರನ್ನು ನಿಪಿ–1 ಎಂದು ಸಾಕ್ಷಿ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಸ್ಥಳ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–2 ಎಂದು ಸಾಕ್ಷಿ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ–3 ಸ್ಥಳ ಮಹಜರನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ–3(ಬಿ) ಎಂದು ಗುರುತಿಸಲಾಯಿತು.

ನನಗೆ ಚಾಸಾ 1 ಪರಿಚಯವಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯವಿರುವುದಿಲ್ಲ. ಚಾಸಾ 1 ಮತ್ತು ಆರೋಪಿಯ ನಡುವೆ ಆದಂತಹ ಗಲಾಟೆಯನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ನಾನು ಯಾವುದೇ ಜಗಳವನ್ನು ಬಿಡಿಸಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

ನನಗೆ ಚಾಸಾ 1 ಮತ್ತು 3 ರವರ ಪರಿಚಯವಿರುತ್ತದೆ. ನಾನು ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದು ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ಪೋಲಿಸರು ಅದನ್ನು ನನಗೆ ಓದಿ ಹೇಳಿರುವುದಿಲ್ಲ. ಪೋಲಿಸರು ನನ್ನನ್ನು ಎಲ್ಲಿಗೂ ಕರೆದುಕೊಂಡು ಹೋಗಿರುವುದಿಲ್ಲ. ಪೋಲಿಸರು ನನ್ನ ಸಮಕ್ಷಮದಲ್ಲಿ ಮಹಜರು ಮಾಡಿ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿರುವುದಿಲ್ಲ. ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಅವರು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಮಾನ್ಯ ಸ.ಸ.ಅ.ರವರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಅನುಮತಿಸಲಾಯಿತು.)

**ಪಾಟೀ ಸವಾಲು – ಮಾನ್ಯ ಸ.ಸ.ಅ. ರವರಿಂದ**

**ಪಾಟೀ ಸವಾಲು – ಆರೋಪಿಗಳ ಪರ ವಕೀಲರಿಂದ**

ಸಾಕ್ಷಿಯು ಹೇಳಿಕೆಯ ಭಾಗವನ್ನು ಅಲ್ಲಗಳೆದಿದ್ದು ಸದರಿ ಹೇಳಿಕೆಯ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು. ನಾನು ಮತ್ತು ಆರೋಪಿಗಳು ರಾಜಿಯಾಗಿದ್ದೇವೆ ಎಂದರೆ ಸರಿ. ರಾಜಿಯಾದ ಕಾರಣ ನಿಪಿ-1 ರಿಂದ ನಿಪಿ-3 ರಲ್ಲಿರುವ ವಿಚಾರಗಳು ಗೊತ್ತಿದ್ದರೂ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸಾಕ್ಷಿಗೆ ದಿನಾಂಕಃ 25.09.2021 ರಂದು ಪೋಲಿಸರ ಮುಂದೆ ನೀಡಿರುವ ಹೇಳಿಕೆ '' ನಾನು ಮೇಲ್ಕಂಡಂತೆ ವಾಸವಾಗಿದ್ದು -------------- ಮತ್ತೆ ನೋಡಿದರೆ ಗುರುತಿಸುತ್ತೇನೆ.'' ಓದಿ ಹೇಳಲಾಯಿತು. ಸಾಕ್ಷಿ ಅದನ್ನು ಅಲ್ಲಗಳೆದಿದ್ದು ಸದರಿ ಹೇಳಿಕೆಯ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು. ನಾನು ನಿಪಿ-3 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯೊಂದಿಗೆ ರಾಜಿಯಾಗಿರುತ್ತೇನೆಂದರೆ ಸರಿ. ಆರೋಪಿಯು ನನ್ನ ಗಂಡನಾಗಿರುವುದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಿನಾಂಕಃ 15.02.2020 ರಂದು ಕೊಳ್ಳೇಗಾಲ ಪಟ್ಟಣ ಪೋಲಿಸರು ನಮ್ಮಗಳನ್ನು ಬರಮಾಡಿಕೊಂಡು ಈ ಪ್ರಕರಣದ ವಿದ್ಯಾಮಾನವನ್ನು ತಿಳಿಸಿ, ಪ್ರಕರಣದಲ್ಲಿ ನಮ್ಮಗಳನ್ನು ಪಂಚರಾಗಬೇಕೆಂದು ಕೇಳಿಕೊಂಡ ಮೇರೆಗೆ ನಾವುಗಳು ಒಪ್ಪಿದ್ದು ಹಾಗೂ ಸ್ಥಳದಲ್ಲಿದ್ದ ಪಿರ್ಯಾದಿದಾರರು ಇದೇ ಕೃತ್ಯ ನಡೆದ ಸ್ಥಳ ಎಂದು ತೋರಿಸಿದ ಮೇರೆಗೆ ಸ್ಥಳವನ್ನು ಅಜಮಾಯಿಸಿ ಮಾಡಲಾಗಿ ನಮ್ಮಗಳ ಮುಂದೆ ಸ್ಥಳ ಮಹಜರು ಕ್ರಮವನ್ನು ಜರುಗಿಸಿ ನಮ್ಮಗಳ

ಸಹಿಗಳನ್ನು ಪಡೆದುಕೊಳ್ಳಲಾಯಿತು ಎಂದು ಹೇಳುವುದು ಸರಿಯಲ್ಲ. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಆರೋಪಿಯ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**
**ಆರೋಪಿಯ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**
**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**
**ಸಿಸಿ ನಂ. 1583 / 2021**

| | | |
|---|---|---|
| ಸಾಕ್ಷಿಯ ಹೆಸರು | : ಮಲ್ಲಿಕಾರ್ಜುನ್ | |
| ತಂದೆಯ ಹೆಸರು | : ಚೆನ್ನಮಲ್ಲ | |
| ವಯಸ್ಸು | : 55 ವರ್ಷ | |
| ಉದ್ಯೋಗ | : ವ್ಯವಸಾಯ | ಚಾಸಾ – 1 |
| ವಾಸ ಸ್ಥಳ | : ಬಸ್ತೀಪುರ | ಪ್ರಾಸಾ – 1 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ** 21.02.2026
**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನನಗೆ ಚಾಸಾ 1 ಮತ್ತು 3 ರವರು ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿಗಳ ಗೊತ್ತು. ಆರೋಪಿಗಳಿಗೂ ನನಗೂ ಯಾವುದೇ ಗಲಾಟೆಯಾಗಿರುವುದಿಲ್ಲ. ಆರೋಪಿಗಳು ನನ್ನನ್ನು ಹಿಡಿದು ತಡೆದು ಅವಾಚ್ಯ ಶಬ್ದಗಳಿಂದ ಬೈದು ಯಾವುದೇ ವಸ್ತುವಿನಿಂದ ಹೊಡೆದಿರುವುದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿರುವುದಿಲ್ಲ. ನಾನು ಆರೋಪಿಗಳ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ ಮತ್ತು ಹೇಳಿಕೆಯನ್ನು

ಕೊಟ್ಟಿರುವುದಿಲ್ಲ. ನಾನು ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿದ್ದು ಅದನ್ನು ಏತಕ್ಕೆ ಮಾಡಿರುತ್ತೇನೆಂದು ಗೊತ್ತಿರುವುದಿಲ್ಲ. ಪೋಲಿಸರು ಅದನ್ನು ಓದಿ ನನಗೆ ಹೇಳಿರುವುದಿಲ್ಲ. ಪೋಲಿಸರು ನನ್ನ ಸಮಕ್ಷಮದಲ್ಲಿ ಮಹಜರು ಮಾಡಿ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಹೇಳಿಕೆ/ದೂರನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಸ್ಥಳ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ-3 ಸ್ಥಳ ಮಹಜರನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು.

ನನಗೆ ಚಾಸಾ 1 ಪರಿಚಯವಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯವಿರುವುದಿಲ್ಲ. ಚಾಸಾ 1 ಮತ್ತು ಆರೋಪಿಯ ನಡುವೆ ಆದಂತಹ ಗಲಾಟೆಯನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ನಾನು ಯಾವುದೇ ಜಗಳವನ್ನು ಬಿಡಿಸಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

ನನಗೆ ಚಾಸಾ 1 ಮತ್ತು 3 ರವರ ಪರಿಚಯವಿರುತ್ತದೆ. ನಾನು ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದು ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ಪೋಲಿಸರು ಅದನ್ನು ನನಗೆ ಓದಿ ಹೇಳಿರುವುದಿಲ್ಲ. ಪೋಲಿಸರು ನನ್ನನ್ನು ಎಲ್ಲಿಗೂ ಕರೆದುಕೊಂಡು ಹೋಗಿರುವುದಿಲ್ಲ. ಪೋಲಿಸರು ನನ್ನ ಸಮಕ್ಷಮದಲ್ಲಿ ಮಹಜರು ಮಾಡಿ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿರುವುದಿಲ್ಲ. ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಅವರು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಮಾನ್ಯ ಸ.ಸ.ಅ.ರವರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಅನುಮತಿಸಲಾಯಿತು.)

**ಪಾಟೀ ಸವಾಲು – ಮಾನ್ಯ ಸ.ಸ.ಅ. ರವರಿಂದ**

**ಪಾಟೀ ಸವಾಲು – ಆರೋಪಿಗಳ ಪರ ವಕೀಲರಿಂದ**

ಸಾಕ್ಷಿಯು ಹೇಳಿಕೆಯ ಭಾಗವನ್ನು ಅಲ್ಲಗಳೆದಿದ್ದು ಸದರಿ ಹೇಳಿಕೆಯ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು. ನಾನು ಮತ್ತು ಆರೋಪಿಗಳು ರಾಜಿಯಾಗಿದ್ದೇವೆ ಎಂದರೆ ಸರಿ. ರಾಜಿಯಾದ ಕಾರಣ

ನಿಪಿ–1 ರಿಂದ ನಿಪಿ–3 ರಲ್ಲಿರುವ ವಿಚಾರಗಳು ಗೊತ್ತಿದ್ದರೂ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸಾಕ್ಷಿಗೆ ದಿನಾಂಕಃ 25.09.2021 ರಂದು ಪೋಲಿಸರ ಮುಂದೆ ನೀಡಿರುವ ಹೇಳಿಕೆ '' ನಾನು ಮೇಲ್ಕಂಡಂತೆ ವಾಸವಾಗಿದ್ದು ------------- ಮತ್ತೆ ನೋಡಿದರೆ ಗುರುತಿಸುತ್ತೇನೆ.'' ಓದಿ ಹೇಳಲಾಯಿತು. ಸಾಕ್ಷಿ ಅದನ್ನು ಅಲ್ಲಗಳೆದಿದ್ದು ಸದರಿ ಹೇಳಿಕೆಯ ಭಾಗವನ್ನು ನಿಪಿ–3 ಎಂದು ಗುರುತಿಸಲಾಯಿತು. ನಾನು ನಿಪಿ–3 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯೊಂದಿಗೆ ರಾಜಿಯಾಗಿರುತ್ತೇನೆಂದರೆ ಸರಿ. ಆರೋಪಿಯು ನನ್ನ ಗಂಡನಾಗಿರುವುದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಿನಾಂಕಃ 15.02.2020 ರಂದು ಕೊಳ್ಳೇಗಾಲ ಪಟ್ಟಣ ಪೋಲಿಸರು ನಮ್ಮಗಳನ್ನು ಬರಮಾಡಿಕೊಂಡು ಈ ಪ್ರಕರಣದ ವಿದ್ಯಾಮಾನವನ್ನು ತಿಳಿಸಿ, ಪ್ರಕರಣದಲ್ಲಿ ನಮ್ಮಗಳನ್ನು ಪಂಚರಾಗಬೇಕೆಂದು ಕೇಳಿಕೊಂಡ ಮೇರೆಗೆ ನಾವುಗಳು ಒಪ್ಪಿದ್ದು ಹಾಗೂ ಸ್ಥಳದಲ್ಲಿದ್ದ ಪಿರ್ಯಾದಿದಾರರು ಇದೇ ಕೃತ್ಯ ನಡೆದ ಸ್ಥಳ ಎಂದು ತೋರಿಸಿದ ಮೇರೆಗೆ ಸ್ಥಳವನ್ನು ಅಜಮಾಯಿಸಿ ಮಾಡಲಾಗಿ ನಮ್ಮಗಳ ಮುಂದೆ ಸ್ಥಳ ಮಹಜರು ಕ್ರಮವನ್ನು ಜರುಗಿಸಿ ನಮ್ಮಗಳ ಸಹಿಗಳನ್ನು ಪಡೆದುಕೊಳ್ಳಲಾಯಿತು ಎಂದು ಹೇಳುವುದು ಸರಿಯಲ್ಲ. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಆರೋಪಿಯ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**
**ಆರೋಪಿಯ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**
**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 1583 / 2021**

| | | |
|---|---|---|
| ಸಾಕ್ಷಿಯ ಹೆಸರು | : ಮಲ್ಲಿಕಾರ್ಜುನ್ | |
| ತಂದೆಯ ಹೆಸರು | : ಚೆನ್ನಮಲ್ಲ | |
| ವಯಸ್ಸು | : 55 ವರ್ಷ | |
| ಉದ್ಯೋಗ | : ವ್ಯವಸಾಯ | ಚಾಸಾ – 1 |
| ವಾಸ ಸ್ಥಳ | : ಬಸ್ತೀಪುರ | ಫ್ರಾಸಾ – 1 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ** 21.02.2026

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನನಗೆ ಚಾಸಾ 1 ಮತ್ತು 3 ರವರ ಪರಿಚಯವಿರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯವಿರುತ್ತದೆ. ಆರೋಪಿಗಳಿಗೂ ನನಗೂ ಯಾವುದೇ ಗಲಾಟೆಯಾಗಿರುವುದಿಲ್ಲ. ಆರೋಪಿಗಳು ನನ್ನನ್ನು ಹಿಡಿದು ತಡೆದು ಅವಾಚ್ಯ ಶಬ್ಧಗಳಿಂದ ಬೈದು ಯಾವುದೇ ವಸ್ತುವಿನಿಂದ ಹೊಡೆದಿರುವುದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿರುವುದಿಲ್ಲ. ನಾನು ಆರೋಪಿಗಳ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ ಮತ್ತು ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ನಾನು ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿದ್ದು ಅದನ್ನು ಏತಕ್ಕೆ ಮಾಡಿರುತ್ತೇನೆಂದು ಗೊತ್ತಿರುವುದಿಲ್ಲ. ಪೋಲಿಸರು ಅದನ್ನು ಓದಿ ನನಗೆ ಹೇಳಿರುವುದಿಲ್ಲ. ಪೋಲಿಸರು ನನ್ನ ಸಮಕ್ಷಮದಲ್ಲಿ ಮಹಜರು ಮಾಡಿ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಹೇಳಿಕೆ/ದೂರನ್ನು ನಿಪಿ–1 ಎಂದು ಸಾಕ್ಷಿ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಸ್ಥಳ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–2 ಎಂದು ಸಾಕ್ಷಿ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ–3 ಸ್ಥಳ ಮಹಜರನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ–3(ಬಿ) ಎಂದು ಗುರುತಿಸಲಾಯಿತು.

ಪೋಲಿಸರು ಅದನ್ನು ನನಗೆ ಓದಿ ಹೇಳಿರುವುದಿಲ್ಲ. ಪೋಲಿಸರು ನನ್ನ ಸಮಕ್ಷಮದಲ್ಲಿ ಮಹಜರು ಮಾಡಿ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ.

ಸಾಕ್ಷಿಗೆ ದೂರನ್ನು ಹಾಗೂ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ದೂರನ್ನು ನಿಪಿ–1 ಎಂದು, ಮಹಜರನ್ನು ನಿಪಿ–2 ಎಂದು, ಸಾಕ್ಷಿ ಸಹಿಯನ್ನು ನಿಪಿ–1(ಎ) ಮತ್ತು ನಿಪಿ–2(ಎ) ಎಂದು ಗುರುತಿಸಲಾಯಿತು.

ನನಗೆ ಚಾಸಾ 1 ನನಗೆ ಅಷ್ಟೊಂದು ಪರಿಚಯವಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯವಿರುವುದಿಲ್ಲ. ಚಾಸಾ 1 ಮತ್ತು ಆರೋಪಿಯ ನಡುವೆ ಆದಂತಹ ಗಲಾಟೆಯನ್ನು ನಾನು ಕಣ್ಣಾರೆ

ನೋಡಿರುವುದಿಲ್ಲ. ನಾನು ಯಾವುದೇ ಜಗಳವನ್ನು ಬಿಡಿಸಿರುವುದಿಲ್ಲ, ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿರುವುದಿಲ್ಲ, ನಾನು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

ನನಗೆ ಚಾಸಾ 1 ಮತ್ತು 3 ರವರ ಪರಿಚಯವಿರುತ್ತದೆ. ನಾನು ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದು ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ಪೋಲಿಸರು ಅದನ್ನು ನನಗೆ ಓದಿ ಹೇಳಿರುವುದಿಲ್ಲ. ಪೋಲಿಸರು ನನ್ನನ್ನು ಎಲ್ಲಿಗೂ ಕರೆದುಕೊಂಡು ಹೋಗಿರುವುದಿಲ್ಲ. ಪೋಲಿಸರು ನನ್ನ ಸಮಕ್ಷಮದಲ್ಲಿ ಮಹಜರು ಮಾಡಿ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿರುವುದಿಲ್ಲ. ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಅವರು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಮಾನ್ಯ ಸ.ಸ.ಅ.ರವರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಅನುಮತಿಸಲಾಯಿತು.)

**ಪಾಟೀ ಸವಾಲು – ಮಾನ್ಯ ಸ.ಸ.ಅ. ರವರಿಂದ**

**ಪಾಟೀ ಸವಾಲು – ಆರೋಪಿಗಳ ಪರ ವಕೀಲರಿಂದ**

ಸಾಕ್ಷಿಗೆ ದಿನಾಂಕಃ 25.09.2021 ರಂದು ಪೋಲಿಸರ ಮುಂದೆ ನೀಡಿರುವ ಹೇಳಿಕೆ " ನಾನು ಮೇಲ್ಕಂಡಂತೆ ವಾಸವಾಗಿದ್ದು ------------- ಮತ್ತೆ ನೋಡಿದರೆ ಗುರುತಿಸುತ್ತೇನೆ." ಓದಿ ಹೇಳಲಾಯಿತು. ಸಾಕ್ಷಿ ಅದನ್ನು ಅಲ್ಲಗಳೆದಿದ್ದು ಸದರಿ ಹೇಳಿಕೆಯ ಭಾಗವನ್ನು ನಿಪಿ–3 ಎಂದು ಗುರುತಿಸಲಾಯಿತು. ನಾನು ನಿಪಿ–3 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯೊಂದಿಗೆ ರಾಜಿಯಾಗಿರುತ್ತೇನೆಂದರೆ ಸರಿ. ಆರೋಪಿಯು ನನ್ನ ಗಂಡನಾಗಿರುವುದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಿನಾಂಕಃ 15.02.2020 ರಂದು ಕೊಳ್ಳೇಗಾಲ ಪಟ್ಟಣ ಪೋಲಿಸರು ನಮ್ಮಗಳನ್ನು ಬರಮಾಡಿಕೊಂಡು ಈ ಪ್ರಕರಣದ ವಿದ್ಯಾಮಾನವನ್ನು ತಿಳಿಸಿ, ಪ್ರಕರಣದಲ್ಲಿ ನಮ್ಮಗಳನ್ನು ಪಂಚರಾಗಬೇಕೆಂದು ಕೇಳಿಕೊಂಡ ಮೇರೆಗೆ ನಾವುಗಳು ಒಪ್ಪಿದ್ದು ಹಾಗೂ ಸ್ಥಳದಲ್ಲಿದ್ದ ಪಿರ್ಯಾದಿದಾರರು ಇದೇ ಕೃತ್ಯ ನಡೆದ ಸ್ಥಳ ಎಂದು ತೋರಿಸಿದ ಮೇರೆಗೆ ಸ್ಥಳವನ್ನು ಅಜಮಾಯಿಸಿ ಮಾಡಲಾಗಿ ನಮ್ಮಗಳ ಮುಂದೆ ಸ್ಥಳ ಮಹಜರು ಕ್ರಮವನ್ನು ಜರುಗಿಸಿ ನಮ್ಮಗಳ ಸಹಿಗಳನ್ನು ಪಡೆದುಕೊಳ್ಳಲಾಯಿತು ಎಂದು ಹೇಳುವುದು ಸರಿಯಲ್ಲ. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಆರೋಪಿಯ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 273 / 2023**

| | | |
|---|---|---|
| ಸಾಕ್ಷಿಯ ಹೆಸರು | : ಸೋಜಿ ಜೋಸೆಫ್ | |
| ಗಂಡನ ಹೆಸರು | : ಮರಿಜೊಸೆಫ್ | |
| ವಯಸ್ಸು | : 43 ವರ್ಷ | |
| ಉದ್ಯೋಗ | : ಗೃಹಿಣಿ | ಚಾಸಾ – 1 |
| ವಾಸ ಸ್ಥಳ | : ಜಿ.ಪಿ. ಮಲ್ಲಪುರಂ ಕೊಳ್ಳೇಗಾಲ | ಫ್ರಾಸಾ – 1 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 28.06.2023**

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ಚಾಸಾ 2 ನನ್ನ ಮಗಳು. ಚಾಸಾ 3 ಮತ್ತು 4 ರವರ ಪರಿಚಯವಿರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ಗಂಡ. ಆರೋಪಿಗೂ ನನಗೂ ಯಾವುದೇ ಗಲಾಟೆಯಾಗಿರುವುದಿಲ್ಲ. ಆರೋಪಿಯು ನನಗೆ ಮದುವೆಯಾದಾಗಿನಿಂದ ದೈಹಿಕ ಮತ್ತು ಮಾನಸಿಕವಾಗಿ ಹಿಂಸೆ ನೀಡಿರುವುದಿಲ್ಲ ಮತ್ತು ಅವಾಚ್ಯ ಶಬ್ಧಗಳಿಂದ ಬೈದು ಕಿರುಕುಳ ನೀಡಿರುವುದಿಲ್ಲ. ದಿನಾಂಕಃ 04.12.2022 ರಂದು ನನಗೂ ಮತ್ತು ಆರೋಪಿಗೂ ಯಾವುದೇ ಗಲಾಟೆಯಾಗಿರುವುದಿಲ್ಲ.. ಆರೋಪಿಯು ನನ್ನನ್ನು ಹಿಡಿದು ತಡೆದು ಅವಾಚ್ಯ ಶಬ್ಧಗಳಿಂದ ಬೈದು ಯಾವುದೇ ವಸ್ತುವಿನಿಂದ ಹೊಡೆದಿರುವುದಿಲ್ಲ. ನನಗೆ ಮತ್ತು ನನ್ನ ಮಕ್ಕಳಿಗೆ ಕೊಲೆ ಬೆದರಿಕೆ ಹಾಕಿರುವುದಿಲ್ಲ. ನಾನು ಆರೋಪಿ ವಿರುದ್ಧ ಪೋಲಿಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ಪೋಲಿಸರು ನನ್ನ ಸಮಕ್ಷಮದಲ್ಲಿ ಮಹಜರು ಮಾಡಿ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ. ನಾನು ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿದ್ದು ಅದನ್ನು ಏತಕ್ಕೆ ಮಾಡಿರುತ್ತೇನೆಂದು ಗೊತ್ತಿರುವುದಿಲ್ಲ. ಪೋಲಿಸರು ಅದನ್ನು ಓದಿ ನನಗೆ ಹೇಳಿರುವುದಿಲ್ಲ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ದೂರನ್ನು ನಿಪಿ–1 ಎಂದು ಸಾಕ್ಷಿ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಸ್ಥಳ ಮಹಜರನ್ನು ತೋರಿಸಲಾಗಿ

ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–2 ಎಂದು ಸಾಕ್ಷಿ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಮಾನ್ಯ ಸ.ಸ.ಅ.ರವರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಅನುಮತಿಸಲಾಯಿತು.)

**ಪಾಟೀ ಸವಾಲು – ಮಾನ್ಯ ಸ.ಸ.ಅ. ರವರಿಂದ**

ದಿನಾಂಕಃ 26.04.2000 ರಂದು ಮದುವೆಯಾಗಿದ್ದು ಮದುವೆಯಾದಾಗಿನಿಂದ ಆರೋಪಿಯು ನನಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆಯನ್ನು ನೀಡುತ್ತಾ ಕಿರುಕುಳವನ್ನು ನೀಡುತ್ತಿದ್ದು ದಿನಾಂಕಃ 04.12.2022 ರಂದು ರಾತ್ರಿ 9.00 ಗಂಟೆಯ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಆರೋಪಿಯು ಕುಡಿದು ಬಂದು ನನ್ನೊಂದಿಗೆ ಏಕಾಏಕಿ ಜಗಳ ತೆಗೆದು ಅವಾಚ್ಯ ಶಬ್ಧಗಳಿಂದ ಸೂಳೇಮಗಳೇ, ಬೋಳಿಮಗಳೇ, ನಿಮ್ಮವ್ವ ನೀವು ಕೇರಳದವರು ಸೂಳೆಯರು ಎಂದು ಬೈದು ಜಗಳ ತೆಗೆದು ನಿನ್ನನ್ನು ನಿನ್ನ ಮಕ್ಕಳನ್ನು ಕೊಲೆ ಮಾಡುತ್ತೇನೆಂದು ಬೆದರಿಕೆ ಹಾಕಿ ನನ್ನ ಕುತ್ತಿಗೆಯನ್ನು ಹಿಡಿದುಕೊಂಡು ಹೊರಗಡೆ ಹೋಗದಂತೆ ತಡೆದು, ಮರದ ರಿಪೀಸ್ ಪಟ್ಟಿಯಿಂದ ನನ್ನ ಮೈಕೈಗೆ ಹೊಡೆದಿದ್ದು ಜಗಳ ಬಿಡಿಸಲು ಬಂದ ನನ್ನ ಮಗಳಿಗೂ ಅವಾಚ್ಯ ಶಬ್ಧಗಳಿಂದ ಬೈದು ಗಲಾಟೆ ಮಾಡಿ ಕೊಲೆ ಬೆದರಿಕೆ ಹಾಕಿರುತ್ತಾನೆಂದು ಪೋಲಿಸರಿಗೆ ನಿಪಿ–1 ರಂತೆ ದೂರು ಕೊಟ್ಟಿರುತ್ತೇನೆಂದರೆ ಸರಿಯಲ್ಲ. ದೂರು ಕೊಟ್ಟ ನಂತರ ಪೋಲಿಸರು ನಿಪಿ–2 ರಂತೆ ಮಹಜರು ಮಾಡಿರುತ್ತಾರೆಂದರೆ ಸರಿಯಲ್ಲ. ನಾನು ಆರೋಪಿಯೊಂದಿಗೆ ರಾಜಿಯಾಗಿರುತ್ತೇನೆಂದರೆ ಸರಿ. ಆರೋಪಿಯು ನನ್ನ ಗಂಡನಾಗಿರುವುದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಆರೋಪಿಯ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**
**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 133 / 2016**

| | | |
|---|---|---|
| ಸಾಕ್ಷಿಯ ಹೆಸರು | : ಡಾಃ ಪುರುಷೋತ್ತಮ್ | |
| ತಂದೆಯ ಹೆಸರು | ರಾಮಶೆಟ್ಟಿ | |
| ವಯಸ್ಸು | : 44 ವರ್ಷ | |
| ಉದ್ಯೋಗ | : ವೈದ್ಯಾಧಿಕಾರಿಗಳು, ಬನ್ನೂರು | ಚಾಸಾ–9 |
| ವಾಸ ಸ್ಥಳ | : ಬನ್ನೂರು | ಫ್ರಾಸಾ–7 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 21.02.2026**

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನಾನು 2006ನೇ ರಿಂದ 2016ನೇ ಸಾಲಿನಿಂದ ಕೊಳ್ಳೇಗಾಲದ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 20.09.20152 ರಂದು ಸಂಜೆ 4.15ರ ಸಮಯದಲ್ಲಿ ನಾನು ಕರ್ತವ್ಯದಲ್ಲಿದ್ದಾಗ ಚಾಸಾ 1 ರವರು ಹಲ್ಲೆಗೊಳಗಾಗಿ ಗಾಯದ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದು, ನಾನು ಚಾಸಾ 1 ರವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದವು.

1. ತಲೆಯ ಹಿಂಭಾಗ 6 x 2 ಸೆಂ.ಮೀ. ಅಳತೆಯ ಹರಿದ ಗಾಯ ಹಾಗೂ ಅದರಲ್ಲಿ ರಕ್ತಸ್ರಾವವಾಗುತ್ತಿತ್ತು.
2. ಎಡ ಮಂಡಿಯಲ್ಲಿ 5 x 5 ಸೆಂ.ಮೀ. ಅಳತೆಯ ತರಚಿದ ಗಾಯ

ನಾನು ಮೇಲಿನ ಗಾಯಗಳಿಗೆ ಚಿಕಿತ್ಸೆ ನೀಡಿ ಅವು ಸಾಮಾನ್ಯ ಸ್ವರೂಪದ ಗಾಯಗಳು ಎಂದು ಅಭಿಪ್ರಾಯಿಸಿ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಸಾಕ್ಷಿ ಒಂದು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–7 ಎಂದು ಸಾಕ್ಷಿ ಸಹಿಯನ್ನು ನಿಪಿ–7(ಎ) ಎಂದು ಗುರುತಿಸಲಾಯಿತು. ಮೇಲೆ ಹೇಳಿದ 1ನೇ ಗಾಯ ಇಟ್ಟಿಗೆ ಚೂರಿನಿಂದ ಹೊಡೆದರೆ ಉಂಟಾಗಬಹುದು ಎಂದರೆ ಸರಿ. 2ನೇ ಗಾಯ ನೆಲದ ಮೇಲೆ ಎಳೆದಾಡಿದರೆ ಉಂಟಾಗಬಹುದು ಎಂದರೆ ಸರಿ.

**ಪಾಟೀ ಸವಾಲು – ಆರೋಪಿಗಳ ಪರ ವಕೀಲರಾದ ಶ್ರೀ ಡಿಕೆ ರವರಿಂದ**

ಮೇಲೆ ಹೇಳಿದ 1 ಮತ್ತು 2ನೇ ಗಾಯಗಳು ನೆಲದ ಮೇಲೆ ಬಿದ್ದರೆ ಅಥವಾ ಒಂದು ಘನ ವಸ್ತು ತಗುಲಿದರೆ ಉಂಟಾಗಬಹುದು ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಆನಂದ ಎಂ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 933 / 2022**

| | | |
|---|---|---|
| ಸಾಕ್ಷಿಯ ಹೆಸರು | : ರಾಜೇಶ್ವರಿ | |
| ಗಂಡನ ಹೆಸರು | : ಮುರುಗನ್ | |
| ವಯಸ್ಸು | : 31 ವರ್ಷ | |
| ಉದ್ಯೋಗ | : ಗೃಹಿಣಿ | ಚಾಸಾ – 1 |
| ವಾಸ ಸ್ಥಳ | : ಹಲಗೂರು | ಪ್ರಾಸಾ – 1 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ** 01.09.2022

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ಆರೋಪಿ ನನ್ನ ಗಂಡನಾಗಬೇಕು. ನನಗೆ ಚಾಸಾ 2 ರಿಂದ 7 ರವರ ಪರಿಚಯವಿರುತ್ತದೆ. ಆರೋಪಿಗೂ ನನಗೂ ಯಾವುದೇ ಗಲಾಟೆಯಾಗಿರುವುದಿಲ್ಲ ಮತ್ತು ಆರೋಪಿ ನನ್ನನ್ನು ಅಡ್ಡಗಟ್ಟಿ ತಡೆದಿರುವುದಿಲ್ಲ. ಆರೋಪಿಗೂ ಚಾಸಾ 2 ರವರಿಗೂ ಯಾವುದೇ ಗಲಾಟೆಯಾಗಿರುವುದಿಲ್ಲ. ಆರೋಪಿಗೂ ಚಾಸಾ 2 ರವರ ನಡುವೆ ಆದಂತಹ ಗಲಾಟೆಯನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಆರೋಪಿ ಚಾಸಾ 2 ರವರಿಗೆ ಹಿಡಿದು ತಡೆದು ಯಾವುದೇ ವಸ್ತುವಿನಿಂದ ಹೊಡೆದಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ಪೋಲಿಸರು ನನ್ನ ಸಮಕ್ಷಮದಲ್ಲಿ ಯಾವುದೇ ಮಹಜರು ಮಾಡಿ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಮರು ಹೇಳಿಕೆ ಕೊಟ್ಟಿರುವುದಿಲ್ಲ. ನಾನು ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿದ್ದು ಅದನ್ನು ಏತಕ್ಕೆ ಮಾಡಿರುತ್ತೇನೆಂದು ಗೊತ್ತಿರುವುದಿಲ್ಲ. ಪೋಲಿಸರು ಅದನ್ನು ಓದಿ ನನಗೆ ಹೇಳಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿರುವುದಿಲ್ಲ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ದೂರನ್ನು ನಿಪಿ–1 ಎಂದು ಸಾಕ್ಷಿ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಸ್ಥಳ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ–2 ಎಂದು ಸಾಕ್ಷಿ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಮಾನ್ಯ ಸ.ಸ.ಅ.ರವರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಅನುಮತಿಸಲಾಯಿತು.)

**ಪಾಟೀ ಸವಾಲು – ಮಾನ್ಯ ಸ.ಸ.ಅ. ರವರಿಂದ**

ಈಗ್ಗೆ ಒಂದು ತಿಂಗಳಿನಿಂದ ನನ್ನ ಗಂಡ ಹಾಗೂ ಅತ್ತೆ ಮಾವ ನನ್ನ ಮೇಲೆ ಅನುಮಾನಗೊಂಡು ಜಗಳ ಮಾಡುತ್ತಿದ್ದರು ದಿನಾಂಕಃ 01.08.2021 ರಂದು ನನ್ನ ಮಾವ ನನಗೆ ದೊಣ್ಣೆಯಿಂದ ತಲೆಗೆ ಹೊಡೆದಿದ್ದು ಈ ಬಗ್ಗೆ

ನಾನು ಹಲಗೂರು ಪೋಲಿಸ್ ಠಾಣೆಗೆ ಕಂಪ್ಲೆಂಟ್ ಕೊಟ್ಟಿದ್ದು ನಂತರ ನನ್ನ ಮಾವ ಚಿಕ್ಕಮಾವ ನಟರಾಜುರವರು ಇರುವ ಕೆಎಂ ದೊಡ್ಡಿಗೆ ಅವರ ಮನೆಯಲ್ಲಿದ್ದು ಸೇಲಂ ನಲ್ಲಿದ್ದ ನನ್ನ ಅಣ್ಣ ಕುಮಾರನಿಗೆ ವಿಷಯ ತಿಳಿಸಿದಾಗ ರಾತ್ರಿ 11.30 ಗಂಟೆ ಸಮಯಕ್ಕೆ ಓಮಿನಿ ಕಾರಿನಲ್ಲಿ ನನ್ನ ಅಣ್ಣ ಕುಮಾರ ಚಿಕ್ಕಪ್ಪ ರವಿ, ಅತ್ತೆ ವಿಜಯ ನಮ್ಮ ಸಂಬಂಧಿಕರಾದ ಸೆಲ್ವಂ ಹಾೂ ಭಾಸ್ಕರ್ ಎಂಬುವರು ಕೆಎಂ ದೊಡ್ಡಿಗೆ ಬಂದು ನನ್ನನ್ನು ಹಾಗೂ ಮಕ್ಕಳನ್ನು ಕರೆದುಕೊಂಡು ಸೇಲಂಗೆ ಹೋಗುತ್ತಿದ್ದಾಗ ಕೊಳ್ಳೇಗಾಲದ ಬಳಿ ನನ್ನ ಗಂಡ ಲಾರಿಯಲ್ಲಿ ನಮ್ಮನ್ನು ಹಿಂಬಾಲಿಸುತ್ತಿದ್ದು ಅದನ್ನು ನೋಡಿದ ನಾವು ಕಾರನ್ನು ಪೆಟ್ರೋಲ್ ಬಂಕ್ ಬಳಿ ತಿರುಗಿಸಿದೆವು. ಆಗ ನನ್ನ ಗಂಡ ಲಾರಿಯನ್ನು ನಿಲ್ಲಿಸಿ ಲಾರಿಯಲ್ಲಿದ್ದ ಒಂದು ಕಬ್ಬಿಣದ ರಾಡನ್ನು ತೆಗೆದುಕೊಂಡು ಬಂದು ಏಕಾಏಕಿ ನನ್ನ ಅಣ್ಣನ ತಲೆಗೆ ಹೊಡೆದಿನು. ನಂತರ ನನಗೆ ನನ್ನ ಜೊತೆ ಬರದಿದ್ದರೆ ನಿನ್ನನ್ನು ಹೊಡೆಯುತ್ತೇನೆ ಎಂದು ಹೆದರಿಸಿ ನನ್ನ ಹಾಗೂ ನನ್ನ ಮಕ್ಕಳನ್ನು ಲಾರಿಯಲ್ಲಿ ಕರೆದುಕೊಂಡು ಕುರಿ ಫಾರಂನಲ್ಲಿರುವ ಮನೆಗೆ ಹೋದನು. ನಂತರ ನಮ್ಮ ಊರಿನಿಂದ ಸಂಬಂಧಿಕರು ಫೋನ್ ಮಾಡಿ ನಿನ್ನ ಅಣ್ಣ ಕುಮಾರನಿಗೆ ತಲೆಗೆ ಗಾಯವಾಗಿ ಕೊಳ್ಳೇಗಾಲ ಆಸ್ಪತ್ರೆಯಲ್ಲಿರುವ ವಿಷಯ ತಿಳಿಸಿದ್ದು ನಾನು ಬೆಳಿಗ್ಗೆ ಕೊಳ್ಳೇಗಾಲ ಸರ್ಕಾರಿ ಆಸ್ಪತ್ರೆಗೆ ಬಂದು ನೋಡಿದಾಗ ನನ್ನ ಅಣ್ಣನ ತಲೆಗೆ ಗಾಯವಾಗಿದ್ದು ಚೇತರಿಸಿಕೊಳ್ಳುತ್ತಿದ್ದು, ನನ್ನ ಜೊತೆ ಮಾತನಾಡಿ ಕಂಪ್ಲೆಂಟ್ ಕೊಡಲು ತಿಳಿಸಿದನು. ಆದ್ದರಿಂದ ನನ್ನ ಅಣ್ಣನ ಮೇಲೆ ರಾಡಿನಿಂದ ಹೊಡೆದು ಗಾಯಗೊಳಿಸಿರುವ ನನ್ನ ಗಂಡ ಮುರುಗನ್ ಮೇಲೆ ಕಾನುನಿನ ಕ್ರಮ ಜರುಗಿಸಲು ಕೋರಿ ಪೋಲಿರಿಗೆ ದೂರು ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಗೆ ದಿನಾಂಕಃ 11.11.2021 ರಂದು ಪೋಲಿಸರ ಮುಂದೆ ನೀಡಿರುವ ಹೇಳಿಕೆ ''ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು ------------- ಮತ್ತೆ ನೋಡಿದರೆ ಗುರುತಿಸುತ್ತೇನೆಂದು'' ಓದಿ ಹೇಳಲಾಯಿತು. ಸಾಕ್ಷಿ ಅದನ್ನು ಅಲ್ಲಗಳೆದಿದ್ದು ಸದರಿ ಹೇಳಿಕೆಯ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು. ನಾನು ನಿಪಿ-3ರಂತೆ ಪೋಲಿಸರ ಮುಂದೆ ಮರು ಹೇಳಿಕೆ ನೀಡಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಿನಾಂಕಃ 02.08.2021 ರಂದು ನಾನು ಸ್ಥಳ ತೋರಿಸಿದ ಮೇರೆಗೆ ಪೋಲಿಸರು ಸ್ಥಳ ಮಹಜರು ಮಾಡಿರುತ್ತಾರೆಂದರೆ ಸರಿಯಲ್ಲ. ಆರೋಪಿಯು ನನ್ನ ಗಂಡನಾದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಆರೋಪಿಯ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 1170 / 2022**

| | | |
|---|---|---|
| ಸಾಕ್ಷಿಯ ಹೆಸರು | : ಚೆನ್ನಾಜಿರಾವ್ | |
| ತಂದೆಯ ಹೆಸರು | : ಲೇಟ್ ಚಿಕ್ಕರಾಚಯ್ಯ | |
| ವಯಸ್ಸು | : 40 ವರ್ಷ | |
| ಉದ್ಯೋಗ | : ಕೂಲಿ | ಚಾಸಾ –3 |
| ವಾಸ ಸ್ಥಳ | : ಪಾಳ್ಯ ಗ್ರಾಮ | ಫ್ರಾಸಾ –3 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 23.08.2022**

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನಾನು ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದು ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ಪೋಲಿಸರು ಅದನ್ನು ನನಗೆ ಓದಿ ಹೇಳಿರುವುದಿಲ್ಲ. ಪೋಲಿಸರು ನನ್ನ ಸಮಕ್ಷಮದಲ್ಲಿ ಯಾವುದೇ ಮಹಜರು ಮಾಡಿ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿರುವುದಿಲ್ಲ. ಸಾಕ್ಷಿಗೆ ದಿಃ 18.05.2022ರ ಅಮಾನತ್ತು ಮಹಜರು ಹಾಗೂ ದಿಃ 19.05.2022ರ ಸ್ಥಳ ಮಹಜರನ್ನು ತೋರಿಸಲಾಗಿ ಅವರು ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-4 ಮತ್ತು ನಿಪಿ-5 ಎಂದು, ಸಾಕ್ಷಿ ಸಹಿಗಳನ್ನು ನಿಪಿ-4(ಬಿ) ಮತ್ತು 5(ಬಿ) ಎಂದು ಗುರುತಿಸಲಾಯಿತು. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಮಾನ್ಯ ಸ.ಸ.ಅ.ರವರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಅನುಮತಿಸಲಾಯಿತು.)

**ಪಾಟೀ ಸವಾಲು – ಮಾನ್ಯ ಸ.ಸ.ಅ. ರವರಿಂದ**

ದಿನಾಂಕಃ 18.05.2022 ರಂದು ಕೊಳ್ಳೇಗಾಲ ಪಟ್ಟಣ ಪೋಲಿಸ್ ಠಾಣೆಯ ಸಬ್ ಇನ್ಸ್ ಪೆಕ್ಟರಾದ ಶ್ರೀಮತಿ ಉಮಾವತಿರವರು ನಮ್ಮಗಳನ್ನು ಬರಮಾಡಿಕೊಂಡು ಈ ಪ್ರಕರಣದ ವಿದ್ಯಾಮಾನವನ್ನು ತಿಳಿಸಿ, ಪ್ರಕರಣದಲ್ಲಿ ನಮ್ಮಗಳನ್ನು ಪಂಚರಾಗಬೇಕೆಂದು ಕೇಳಿಕೊಂಡ ಮೇರೆಗೆ ನಾವುಗಳು ಒಪ್ಪಿದ್ದು ನಮ್ಮಗಳ ಸಮಕ್ಷಮದಲ್ಲಿ ನಮ್ಮಗಳ ಮುಂದೆ ಸ್ಥಳ ಮಹಜರು ಕ್ರಮವನ್ನು ಜರುಗಿಸಿ ಎರಡು ಕುರಿಗಳು ಹಾಗೂ ಎರಡು ಮೋಟಾರು ಬೈಕುಗಳನ್ನು ಅಮಾನತ್ತು ಪಡಿಸಿಕೊಂಡು ನಮ್ಮಗಳ ಸಹಿಗಳನ್ನು ಪಡೆದುಕೊಳ್ಳಲಾಯಿತು ಎಂದು ಹೇಳುವುದು ಸರಿಯಲ್ಲ. ದಿನಾಂಕಃ 19.05.2022 ರಂದು ಕೊಳ್ಳೇಗಾಲ ಪಟ್ಟಣ ಪೋಲಿಸ್ ಠಾಣೆಯ ಸಬ್ ಇನ್ಸ್ ಪೆಕ್ಟರಾದ ಶ್ರೀಮತಿ ಉಮಾವತಿರವರು ನಮ್ಮಗಳನ್ನು ಬರಮಾಡಿಕೊಂಡು ಈ ಪ್ರಕರಣದ ವಿದ್ಯಾಮಾನವನ್ನು ತಿಳಿಸಿ, ಪ್ರಕರಣದಲ್ಲಿ

ನಮ್ಮಗಳನ್ನು ಪಂಚರಾಗಬೇಕೆಂದು ಕೇಳಿಕೊಂಡ ಮೇರೆಗೆ ನಾವುಗಳು ಒಪ್ಪಿದ್ದು ನಮ್ಮಗಳ ಸಮಕ್ಷಮದಲ್ಲಿ ಸ್ಥಳ ಮಹಜರು ಕ್ರಮವನ್ನು ಜರುಗಿಸಿ ನಮ್ಮಗಳ ಸಹಿಗಳನ್ನು ಪಡೆದುಕೊಳ್ಳಲಾಯಿತು ಎಂದು ಹೇಳುವುದು ಸರಿಯಲ್ಲ. ಅರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸಾಕ್ಷಿಗೆ ದಿನಾಂಕಃ 19.05.2022 ರಂದು ಪೋಲಿಸರ ಮುಂದೆ ನೀಡಿರುವ ಹೇಳಿಕೆ '' ನಾನು ಮೇಲ್ಕಂಡ ವಿಳಾಸದಲ್ಲಿ ಕೂಲಿ ಕೆಲಸ ಮಾಡಿಕೊಂಡು ವಾಸವಾಗಿದ್ದು ------------- ನನ್ನ ಹೇಳಿಕೆಯನ್ನು ನೀಡಿರುತ್ತೇನೆ.'' ಓದಿ ಹೇಳಲಾಯಿತು. ಸಾಕ್ಷಿ ಅದನ್ನು ಅಲ್ಲಗಳೆದಿದ್ದು ಸದರಿ ಹೇಳಿಕೆಯ ಭಾಗವನ್ನು ನಿಪಿ-7 ಎಂದು ಗುರುತಿಸಲಾಯಿತು. ನಾನು ನಿಪಿ-7 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದರೂ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಆರೋಪಿಯ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**
**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**
**ಸಿಸಿ ನಂ. 240 / 2021**

| | | |
|---|---|---|
| ಸಾಕ್ಷಿಯ ಹೆಸರು | : ಗಿರೀಶ್ | |
| ತಂದೆಯ ಹೆಸರು | : ಮಹದೇವ | |
| ವಯಸ್ಸು | : 38 ವರ್ಷ | |
| ಉದ್ಯೋಗ | : ಪೋಟೋಗ್ರಾಫರ್ | ಚಾಸಾ -6 |
| ವಾಸ ಸ್ಥಳ | : ಕೊಳ್ಳೇಗಾಲ | ಫ್ರಾಸಾ -5 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 03.09.2022**

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನಾನು ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿದ್ದು ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿರುವುದಿಲ್ಲ. ನನ್ನನ್ನು ಪೋಲಿಸರು ಪೋಟೋ ತೆಗೆಯಲು ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿರುವುದಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ಪೋಟೋವನ್ನು ತೆಗೆದಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಮಾನ್ಯ ಸ.ಸ.ಅ.ರವರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಅನುಮತಿಸಲಾಯಿತು.)

**ಪಾಟೀ ಸವಾಲು – ಮಾನ್ಯ ಸ.ಸ.ಅ. ರವರಿಂದ**

ಸಾಕ್ಷಿಗೆ ದಿನಾಂಕಃ 03.07.2020ರಂದು ಪೋಲಿಸರ ಮುಂದೆ ನೀಡಿರುವ ಹೇಳಿಕೆ ''ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುತ್ತೇನೆ. -------------- ಮತ್ತೆ ನೋಡಿದರೆ ಗುರುತಿಸುತ್ತೇನೆ.'' ಓದಿ ಹೇಳಲಾಯಿತು. ಸಾಕ್ಷಿ ಅದನ್ನು ಅಲ್ಲಗಳೆದಿದ್ದು ಸದರಿ ಹೇಳಿಕೆಯ ಭಾಗವನ್ನು ಈಗಾಗಲೇ ನಿಪಿ–11 ಎಂದು ಗುರುತಿಸಲಾಗಿರುತ್ತದೆ. ನಾನು ನಿಪಿ–11 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಆರೋಪಿಯ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 218 / 2020**

ಸಾಕ್ಷಿಯ ಹೆಸರು : ಎಸ್. ಚೇತನ್

| | | |
|---|---|---|
| ತಂದೆಯ ಹೆಸರು | : ಸುರೇಶ್ | |
| ವಯಸ್ಸು | : 25 ವರ್ಷ | |
| ಉದ್ಯೋಗ | : ಮೀನು ವ್ಯಾಪಾರಿ | ಚಾಸಾ –4 |
| ವಾಸ ಸ್ಥಳ | : ಸಂತೇಬೀದಿ, ಕೊಳ್ಳೇಗಾಲ ಪಟ್ಟಣ | ಫ್ರಾಸಾ –3 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 09.11.2021**

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನನಗೆ ಚಾಸಾ 1 ಮತ್ತು 3 ರವರ ಪರಿಚಯವಿರುತ್ತದೆ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿರುವುದಿಲ್ಲ,ನಾನು ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದು ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ಪೋಲಿಸರು ಅದನ್ನು ನನಗೆ ಓದಿ ಹೇಳಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿರುವುದಿಲ್ಲ. ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಅವರು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಮಾನ್ಯ ಸ.ಸ.ಅ.ರವರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಅನುಮತಿಸಲಾಯಿತು.)

**ಪಾಟೀ ಸವಾಲು – ಮಾನ್ಯ ಸ.ಸ.ಅ. ರವರಿಂದ**

ದಿನಾಂಕಃ 15.02.2020 ರಂದು ಕೊಳ್ಳೇಗಾಲ ಪಟ್ಟಣ ಪೋಲಿಸ್ ಠಾಣೆಯ ಸಹಾಯಕ ಸಬ್ ಇನ್ಸ್ ಪೆಕ್ಟರಾದ ನಾಗರಾಜುರವರು ನಮ್ಮಗಳನ್ನು ಬರಮಾಡಿಕೊಂಡು ಈ ಪ್ರಕರಣದ ವಿದ್ಯಾಮಾನವನ್ನು ತಿಳಿಸಿ, ಪ್ರಕರಣದ ವಿದ್ಯಾಮಾನಗಳನ್ನು ತಿಳಿಸಿ, ಪ್ರಕರಣದಲ್ಲಿ ನಮ್ಮಗಳನ್ನು ಪಂಚರಾಗಬೇಕೆಂದು ಕೇಳಿಕೊಂಡ ಮೇರೆಗೆ ನಾವುಗಳು ಒಪ್ಪಿದ್ದು ಹಾಗೂ ಸ್ಥಳದಲ್ಲಿದ್ದ ಪಿರ್ಯಾದಿದಾರರು ಇದೇ ಕೃತ್ಯ ನಡೆದ ಸ್ಥಳ ಎಂದು ತೋರಿಸಿದ ಮೇರೆಗೆ ಸ್ಥಳವನ್ನು ಅಜಮಾಯಿಸಿ ಮಾಡಲಾಗಿ ನಮ್ಮಗಳ ಮುಂದೆ ಸ್ಥಳ ಮಹಜರು ಕ್ರಮವನ್ನು ಜರುಗಿಸಿ ನಮ್ಮಗಳ ಸಹಿಗಳನ್ನು ಪಡೆದುಕೊಳ್ಳಲಾಯಿತು ಎಂದು ಹೇಳುವುದು ಸರಿಯಲ್ಲ. ಅರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಆರೋಪಿಯ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 12/ 2021**

| | | |
|---|---|---|
| ಸಾಕ್ಷಿಯ ಹೆಸರು | : ಪ್ರಸನ್ನಕುಮಾರ್ | |
| ತಂದೆಯ ಹೆಸರು | : ಶಿವಲಿಂಗಸ್ವಾಮಿ | |
| ವಯಸ್ಸು | : 25 ವರ್ಷ | |
| ಉದ್ಯೋಗ | : ಎಲ್ ಅಂಡ್ ಟಿ ಫೈನಾನ್ಸ್ ಕೆಲಸ | ಚಾಸಾ -3 |
| ವಾಸ ಸ್ಥಳ | : ಮಣಗಳ್ಳಿ ಗ್ರಾಮ | ಫ್ರಾಸಾ -2 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 15.11.2021**

**ಮುಖ್ಯ ವಿಚಾರಣೆ - ಮಾನ್ಯ ಸ.ಸ.ಅ. ರವರಿಂದ**

ನನಗೆ ಚಾಸಾ 1 ಮತ್ತು 2 ರವರ ಪರಿಚಯವಿರುತ್ತದೆ. ಪೋಲಿಸರು ನನ್ನನ್ನು ಕರೆದುಕೊಂಡು ಈ ಪ್ರಕರಣದ ಘಟನಾ ಸ್ಥಳದಲ್ಲಿ ಮಹಜರು ಮಾಡಿರುತ್ತಾರೆ. ಮಹಜರಿನಲ್ಲಿ ಮೋಟಾರು ಬೈಕು ಕಳ್ಳತನವಾಗಿರುವ ಬಗ್ಗೆ ಬರೆದುಕೊಂಡಿರುತ್ತಾರೆ. ಮಹಜರನ್ನು ದಿನಾಂಕಃ 08.01.2021 ರಂದು ಮಧ್ಯಾಹ್ನ 12 ರಿಂದ 1 ಗಂಟೆಯವರೆಗೆ ಮಾಡಿರುತ್ತಾರೆ. ಅದಕ್ಕೆ ನನ್ನ ಸಹಿಯನ್ನು ಮಾಡಿರುತ್ತೇನೆ. ಸಾಕ್ಷಿಗೆ ನಿಪಿ-3 ಸ್ಥಳ ಮಹಜರನ್ನು ತೋರಿಸಲಾಗಿ ಅವರು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು - 3ನೇ ಆರೋಪಿಗಳ ಪರ ವಕೀಲರಾದ ಡಿಎಸ್ ಬಿ ರವರಿಂದ**

ನಿಪಿ–3 ರ ಮಹಜರನ್ನು ಪೋಲಿಸ್ ಠಾಣೆಯಲ್ಲಿ ಬರೆದಿರುವುದಿಲ್ಲ ಮಹಜರನ್ನು ಕಳ್ಳತನವಾದ ಮಂಜುನಾಥ ರವರ ಬಾಡಿಗೆಯ ಮನೆಯ ಮುಂದೆ ಬರೆದಿರುತ್ತಾರೆ. ಸದರಿ ಮನೆಯ ನಂಬರು ನನಗೆ ಗೊತ್ತಿರುವುದಿಲ್ಲ. ಮಂಜುನಾಥ್ ರವರ ಮನೆಯ ಬೀದಿ ಯಾವುದೆಂದು ನನಗೆ ಗೊತ್ತಿರುವುದಿಲ್ಲ. ಅವರ ಮನೆಯು ಯಾರ ಹೆಸರಿನಲ್ಲಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಮಹಜರು ಸಮಯದಲ್ಲಿ ಆ ಮನೆಯ ಮಾಲೀಕರು ಹಾಜರಿದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಮಹಜರು ಸಮಯದಲ್ಲಿ ನನ್ನ ಜೊತೆ ದೀಪಕ್ ಎಂಬುವವರು ಬಂದಿದ್ದರು. ಮಹಜರು ಸ್ಥಳದ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ನಿಪಿ–3 ರ ಮಹಜರನ್ನು ಪೋಲಿಸ್ ಠಾಣೆಯಲ್ಲಿ ಬರೆದಿದ್ದು ನಾನು ಮಂಜುನಾಥನ ಸ್ನೇಹಿತನಾಗಿರುವುದರಿಂದ ಅದಕ್ಕೆ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ನಾನು ಯಾವುದೇ ಸ್ಥಳಕ್ಕೆ ಹೋಗಿರುವುದಿಲ್ಲ ನನ್ನ ಎದುರು ಯಾವುದೇ ಮಹಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–3 ರಲ್ಲಿ ಬರೆದಿರುವಂತೆ ಆ ಸ್ಥಳದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ಮಂಜುನಾಥರವರ ಮಾತನ್ನು ಕೇಳಿಕೊಂಡು ಅವರು ಹೇಳಿಕೊಟ್ಟ ರೀತಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು – 1 ಮತ್ತು 2ನೇ ಆರೋಪಿಗಳ ಪರ ವಕೀಲರಾದ ಎನ್‌ಬಿಆರ್ ರವರಿಂದ**

ನಾನು ಮತ್ತು ಮಂಜುನಾಥರವರು ಒಂದೇ ಕಂಪನಿಯಲ್ಲಿ ಕೆಲಸ ಮಾಡುವ ಆತ್ಮೀಯ ಸ್ನೇಹಿತರೆಂದರೆ ಸರಿ. ಘಟನಾ ಸ್ಥಳದಲ್ಲಿ ಮಂಜುನಾಥರವರು ಗಾಡಿ ನಿಲ್ಲಿಸಿದ ಬಗ್ಗೆ ಗುರುತನ್ನು ನಾನು ನೋಡಿರುವುದಿಲ್ಲ. ಘಟನಾ ಸ್ಥಳದಲ್ಲಿ ಲಾಕನ್ನು ಹೊಡೆದು ಹಾಕಿದ್ದ ಬಗ್ಗೆ ಯಾವುದೇ ಕುರುಹುಗಳು ಹಾಗೂ ವಸ್ತುಗಳು ಕಂಡು ಬಂದಿರುವುದಿಲ್ಲ. ಮಂಜುನಾಥರವರು ಬಾಡಿಗೆ ಮನೆಯಲ್ಲಿ ವಾಸವಿದ್ದ ಬಗ್ಗೆ ದಾಖಲೆಗಳನ್ನು ಮಹಜರು ಕಾಲದಲ್ಲಿ ತೋರಿಸಿರುವುದಿಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ನ್ಯಾಯಾಧಿಕರಣ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 210 / 2019**

| | | |
|---|---|---|
| ಸಾಕ್ಷಿಯ ಹೆಸರು | : ಮಲ್ಲಿಕಾರ್ಜುನ್ | |
| ತಂದೆಯ ಹೆಸರು | : ಚೆನ್ನಮಲ್ಲ | |
| ವಯಸ್ಸು | : 55 ವರ್ಷ | |
| ಉದ್ಯೋಗ | : ವ್ಯವಸಾಯ | ಚಾಸಾ –4 |
| ವಾಸ ಸ್ಥಳ | : ಬಸ್ತೀಪುರ | ಫ್ರಾಸಾ –4 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 09.11.2021**

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನನಗೆ ಚಾಸಾ 1 ಮತ್ತು 3 ರವರ ಪರಿಚಯವಿರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯವಿರುತ್ತದೆ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿರುವುದಿಲ್ಲ, ನಾನು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ. ನಾನು ಈ ಪ್ರಕರಣದ ಕೃತ್ಯವನ್ನು ಕಣ್ಣಾರೆ ನೋಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಮಾನ್ಯ ಸ.ಸ.ಅ.ರವರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಅನುಮತಿಸಲಾಯಿತು.)

**ಪಾಟೀ ಸವಾಲು – ಮಾನ್ಯ ಸ.ಸ.ಅ. ರವರಿಂದ**

ದಿನಾಂಕಃ 04.05.2019 ರಂದು ರಾತ್ರಿ 10.00 ಗಂಟೆ ಸಮಯದಲ್ಲಿ ರಾಮಯ್ಯ ಮತ್ತು ಅವರ ಹೆಂಡತಿ ಜಯಮ್ಮ ಮತ್ತು ಅವರ ಮಗ ಮಲ್ಲರಾಜು ಎಲ್ಲರು ಅವರ ಮನೆಯ ಮುಂದೆ ಕುಳಿತ್ತಿದ್ದಾಗ ಲೇಟ್ ಕುನ್ನಮಲ್ಲಯ್ಯರವರ ಮಗನಾದ ಕೆ. ಮಲ್ಲರಾಜು ಮತ್ತು ಅವರ ಅಣ್ಣ ಕೆ. ಮನೋಹರ್, ಶಿವಣ್ಣನ ಮಗನಾದ ಪ್ರಕಾಶ್, ಮಲ್ಲರಾಜುರವರ ಮಗನಾದ ಸಿದ್ದರಾಜು, ಸಿದ್ದರಾಜು ಮಗ ರಾಚಯ್ಯ ಅಃ ಕೊರಕ್, ಶಿವಕುಮಾರ್ ಹಾಗೂ ಗುರುಮಲ್ಲಯ್ಯನ ಮಗನಾದ ರಾಜುರವರು ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದು ಮಲ್ಲರಾಜುರವರ ಮನೆಯ ಬಳಿ ಬಾಯಿಗೆ ಬಂದಂತೆ ಅವಾಚ್ಯ ಶಬ್ಧಗಳಿಂದ ಬೈಯುತ್ತಿದ್ದರು ಆಗ ರಾಮಯ್ಯರವರು ಕೇಳಲು ಹೋದಾಗ ರಾಚಯ್ಯ ಅಃ ಕೊರಕನು ರಾಮಯ್ಯರವರ ಬೆನ್ನಿಗೆ ಕೈಯಿಂದ ಹೊಡೆದನು. ಆಗ ಮಲ್ಲರಾಜು ರವರು ಜಗಳ ಬಿಡಿಸಲು ಬಂದಾಗ ಪ್ರಕಾಶ್ ಎಂಬುವವನು ಆರ್. ಮಲ್ಲರಾಜುರವರ ಕುತ್ತಿಗೆಗೆ ಕೈಯಿಂದ ಹೊಡೆದನು. ರಾಮಯ್ಯರವರ ಹೆಂಡತಿ ಜಯಮ್ಮ ರವರು ಜಗಳ ಬಿಡಿಸಲು ಬಂದಾಗ ಮಲ್ಲರಾಜು ಮತ್ತು

ಮನೋಹರರವರು ಜಯಮ್ಮರವರನ್ನು ಬೈಯುತ್ತಾ ಜುಟ್ಟನ್ನು ಹಿಡಿದು ಎಳೆದಾಡಿದರು, ನಂತರ ಪ್ರಕಾಶ, ಸಿದ್ದರಾಜು, ಶಿವಕುಮಾರ್ ಮತ್ತು ರಾಜು ಇವರುಗಳು ತಮ್ಮ ಕೈಗಳಿಂದ ಜಯಮ್ಮರವರ ಮೈಕೈಗೆ ಹೊಡೆದರು. ಆಗ ಮಲ್ಲರಾಜು ಜಯಮ್ಮರವರ ಸೀರೆಯನ್ನು ಎಳೆದು ಅವಮಾನ ಮಾಡಿದರೆಂದು ಹೇಳುವುದು ಸರಿಯಲ್ಲ. ಆಗ ಅಲ್ಲೆ ಇದ್ದ ನಾನು, ನನ್ನ ತಮ್ಮ ಸಿ. ಮೂರ್ತಿ ಇಬ್ಬರು ಜಗಳ ಬಿಡಿಸಿ ಸಮಾಧಾನ ಪಡಿಸಿದೆವು ಎಂದು ಹೇಳುವುದು ಸರಿಯಲ್ಲ. ರಾಮಯ್ಯರವರ ಜೊತೆ ಗಲಾಟೆ ಮಾಡಿದವರನ್ನು ನೋಡಿರುತ್ತೇನೆಂದು ಹಾಗೂ ಠಾಣೆಗೆ ಹಾಜರಾಗಿ ಹೇಳಿಕೆ ನೀಡಿರುತ್ತೇನೆಂದು ಹೇಳುವುದು ಸರಿಯಲ್ಲ. ಅರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಆರೋಪಿಯ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. / 2016**

| | | |
|---|---|---|
| ಸಾಕ್ಷಿಯ ಹೆಸರು | : ಪೀಟರ್ | |
| ತಂದೆಯ ಹೆಸರು | : ಮೈಕೆಲ್ | |
